**ದಿನಾಂಕಃ 12-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದಃ-**

ನಾನು ಈ ಪ್ರಕರಣದಲ್ಲಿ 3 ನೇ ವಾದಿ ಶಕುಂತಲ ಇರುತ್ತೇನೆ. ಉಳಿದ ವಾದಿಯರು ಈ ಪ್ರಕರಣದಲ್ಲಿ ಅವರ ಪರವಾಗಿ ಕೂಡ ಸಾಕ್ಷಿ ನುಡಿಯುವಂತೆ ನನಗೆ ಹೇಳಿದ್ದಾರೆ. ಈ ಬಗ್ಗೆ ನಾವು ಹೊರಗಡೆ ಸೇರಿ ತೀರ್ಮಾನ ಮಾಡಿದ್ದೇವೆ. ಪ್ರತಿವಾದಿ ನಾಗರಾಜ್ ನನಗೆ ತಮ್ಮನಾಗಬೇಕು. ಸದರಿ ನಾಗರಾಜ್ ನಂತರ ಸುಗುಣ ಹುಟ್ಟಿರುತ್ತಾರೆ.

2. ದಾವ ಆಸ್ತಿ 29 ಅಡಿ x 50 ಅಡಿ ಇರುತ್ತದೆ. ಸದರಿ ಆಸ್ತಿಯನ್ನು ನಮ್ಮ ತಂದೆ ಸ್ವತಃ ಖರೀದಿಸಿದ್ದಾರೆ. ನಮ್ಮ ತಂದೆಗೆ ಪ್ರತಿವಾದಿ ನಾಗರಾಜ್ ಒಬ್ಬನೇ ಗಂಡು ಮಗನಿದ್ದಾನೆ ಮತ್ತು ನಾಲ್ಕು ಮಂದಿ ಹೆಣ್ಣು ಮಕ್ಕಳು ಇರುತ್ತಾರೆ. ನಮ್ಮ ತಂದೆ ತಾಯಿಯೊಂದಿಗೆ ಪ್ರತಿವಾದಿ ನಾಗರಾಜ್, ಆತನ ಹೆಂಡತಿ ಮಕ್ಕಳೊಂದಿಗೆ ದಾವ ಆಸ್ತಿಯಲ್ಲಿರುವ ಮನೆಯಲ್ಲಿಯೇ ವಾಸವಾಗಿದ್ದರು ಅನ್ನುವುದು ನಿಜ. ನಮ್ಮ ತಂದೆ 2004 ನೇ ಇಸವಿ ಸೆಪ್ಟೆಂಬರ್ ತಿಂಗಳಿನಲ್ಲಿ ಮೃತಪಟ್ಟಿರಬಹುದು. ನಮ್ಮ ತಾಯಿ ದಿಃ 23-09-2018 ರಲ್ಲಿ ಮೃತರಾಗಿದ್ದಾರೆ. ನನ್ನ ತಂದೆ ಜೀವಂತ ಇರುವಾಗಲೇ ದಿಃ 22-11-1990 ರಂದು ನೋಂದಾಯಿತ ವ್ಯವಸ್ಥ ಪತ್ರದ ಮೂಲಕ ದಾವ ಆಸ್ತಿಯ ಅರ್ಧ ಭಾಗವನ್ನು ಪ್ರತಿವಾದಿ ನಾಗರಾಜ್ ರವರಿಗೆ ಕೊಟ್ಟಿದ್ದಾರೆ ಅನ್ನುವುದು ಸರಿಯಲ್ಲ.

3. ದಾವೆಯಲ್ಲಿ ಪ್ರತಿವಾದಿಯು ಲಿಖಿತ ಹೇಳಿಕೆ ಸಲ್ಲಿಸಿದ್ದಾನೆ ಅಂದರೆ ಸಾಕ್ಷಿಯು ನಮಗೆ 1/5 ಭಾಗ ಬರಬೇಕೆಂದು ಹೇಳುತ್ತಾರೆ. ನಮ್ಮ ವಕೀಲರು ಪ್ರತಿವಾದಿಯು ತಕರಾರು ಹಾಕಿ ಅರ್ಧ ಭಾಗ ತಂದೆ ಕೊಟ್ಟ ಬಗ್ಗೆ ಹೇಳಿದ್ದಾರೆ ಅನ್ನುವ ವಿಚಾರವನ್ನು ನಿಮಗೆ ತಿಳಿಸಿದಾರ ಎಂದರೆ ಸಾಕ್ಷಿಯು ಮೊದಲು ಇಲ್ಲ ಎಂದು ಹೇಳಿ ನಂತರ ವಕೀಲರು ಹೇಳಿದ್ದಾರೆ ಅದು ಸುಳ್ಳು ಇರುತ್ತದೆ ಎಂದು ಹೇಳುತ್ತಾರೆ.

ದಾವೆಯಲ್ಲಿ ಪ್ರತಿವಾದಿಯ ಲಿಖಿತ ಹೇಳಿಕೆಗೆ rejoinder ಹಾಕಿಲ್ಲ. ನಿಮ್ಮ ತಂದೆ ಮಾಡಿದ ವ್ಯವಸ್ಥ ಪತ್ರಕ್ಕೆ ನಿಮ್ಮ ತಕರಾರು ಇದೆಯಾ ಎಂದರೆ ಸಾಕ್ಷಿಯು ಇಲ್ಲ ಆ ರೀತಿ ನಮ್ಮ ತಂದೆ ವ್ಯವಸ್ಥ ಪತ್ರ ಮಾಡಿಲ್ಲ ಎಂದು ಹೇಳುತ್ತಾರೆ.

4. ಮದುವೆಯಾದ ನಂತರ ನಾವೆಲ್ಲ ಹೆಣ್ಣು ಮಕ್ಕಳು ನಮ್ಮ ನಮ್ಮ ಗಂಡನ ಮನೆಯಲ್ಲಿ ಇದ್ದೆವು ಎನ್ನುವುದು ನಿಜ. ನಾವು ಯಾವುದೇ ಹೆಣ್ಣು ಮಕ್ಕಳು ತವರು ಮನೆಯಲ್ಲಿ ಬಂದು ವಾಸವಾಗಿರಲಿಲ್ಲ ಅನ್ನುವುದು ನಿಜ. ನಮ್ಮ ತಮ್ಮ ಪ್ರತಿವಾದಿ ನಾಗರಾಜ್ ನೌಕರಿಯಲ್ಲಿ ಇದ್ದರು ಎನ್ನುವುದು ನಿಜ. ನಮ್ಮ ತಂದೆಗೆ ಯಾವುದೇ ಕೆಲಸ ಇರಲಿಲ್ಲ ಮತ್ತು ಆದಾಯ ಇರಲಿಲ್ಲ ಅನ್ನುವುದು ಸರಿಯಲ್ಲ. ಪ್ರತಿವಾದಿ ಕೂಡ ನಮ್ಮ ಮದುವೆಯ ಕಾಲದಲ್ಲಿ ತಂದೆಯ ಜೊತೆಗಿದ್ದು ಮದುವೆಯ ಖರ್ಚು ವೆಚ್ಚ ನೋಡಿಕೊಂಡಿದ್ದಾನೆ ಮತ್ತು ಎಲ್ಲಾ ಕಾರ್ಯಗಳಲ್ಲಿ ಭಾಗಿಯಾಗಿದ್ದರು ಅನ್ನುವುದು ಸರಿಯಲ್ಲ. ವ್ಯವಸ್ಥ ಪತ್ರ ಮಾಡಿದ ನಂತರ ಎಲ್ಲಾ ಹೆಣ್ಣು ಮಕ್ಕಳಿಗೆ ಪ್ರತಿವಾದಿ ತಲಾ ಒಂದೂವರೆ ಲಕ್ಷ ರೂಪಾಯಿ ನೀಡಿದ್ದಾನೆ ಎಂದರೆ ಸಾಕ್ಷಿಯು 14 ಸಾವಿರ ರೂಪಾಯಿ ನೀಡಿದ್ದಾರೆ ಎಂದು ಹೇಳುತ್ತಾರೆ. ಸಾಕ್ಷಿಯು ಸ್ವತಃ ಮುಂದುವರೆದು ಹಣ ನಮ್ಮ ತಂದೆ ಕೊಟ್ಟಿದ್ದರು ಎಂದು ಹೇಳುತ್ತಾರೆ. ದಾವ ಆಸ್ತಿಯಲ್ಲಿರುವ ಅರ್ಧ ಭಾಗದಲ್ಲಿ ಇರುವ 1/5 ಭಾಗದ ಹಕ್ಕನ್ನು ಪ್ರತಿವಾದಿ ನಾಗರಾಜ್ ನಿಗೆ ಬಿಟ್ಟುಕೊಡಲು ಮೌಖಿಕವಾಗಿ ಒಪ್ಪಿ ಕೊಂಡಿದ್ದೇವೆ ಅನ್ನುವುದು ಸರಿಯಲ್ಲ. ನಮ್ಮ ತಂದೆ 14 ಸಾವಿರ ಹಣ ಕೊಟ್ಟಾಗ ನಮ್ಮ ಭಾಗದ 1/5 ಭಾಗವನ್ನು ಪ್ರತಿವಾದಿಗೆ ಬಿಟ್ಟುಕೊಡಬೇಕೆಂದು ಹೇಳಿದ್ದಾರೆ ಅನ್ನುವುದು ನಿಜ. ಆ ರೀತಿ ಮೌಖಿಕವಾಗಿ ನಮ್ಮ ತಂದೆ ಹೇಳಿದರು ನಾವು ನಮ್ಮ ಹಕ್ಕನ್ನು ನಮ್ಮ ತಮ್ಮ /ಪ್ರತಿವಾದಿ ಹೆಸರಿಗೆ ಲಿಖಿತ ದಾಖಲೆಯ ಮೂಲಕ ಹಕ್ಕನ್ನು ಬಿಟ್ಟುಕೊಟ್ಟಿಲ್ಲ ಅಂದರೆ ಸಾಕ್ಷಿಯು ಹಕ್ಕನ್ನು ಬಿಟ್ಟುಕೊಟ್ಟಿಲ್ಲ ಎಂದು ಹೇಳುತ್ತಾರೆ. ಈಗ ನಾನು ನನ್ನ ಗಂಡನೊಂದಿಗೆ ಸೇರಿ ನನ್ನ ಉಳಿದ ಸಹೋದರಿಯರನ್ನು ಎತ್ತಿಕಟ್ಟಿ , ಸುಳ್ಳು ಕೇಸನ್ನು

ಪ್ರತಿವಾದಿಯ ವಿರುದ್ಧ ಸಲ್ಲಿಸಿದ್ದೇವೆ ಅನ್ನುವುದು ಸರಿಯಲ್ಲ. ದಾವ ಆಸ್ತಿಯಲ್ಲಿ ನಮಗೆ ಯಾವುದೇ ರೀತಿಯಾದ ಹಕ್ಕು ಇಲ್ಲ ಅನ್ನುವುದು ಸರಿಯಲ್ಲ. ನಾವು ಎಲ್ಲಾ ಹೆಣ್ಣು ಮಕ್ಕಳು ದಾವ ಆಸ್ತಿಯಲ್ಲಿರುವ ನಮ್ಮ ಹಕ್ಕನ್ನು ಹಿಂದೆಯೇ ಬಿಟ್ಟುಕೊಟ್ಟಿದ್ದೇವೆ ಅನ್ನುವುದು ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು, ಆಲಿಸಿ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಪದ್ಮ ಪ್ರಸಾದ್ )**
**2 ನೇ ಅಪರ ನಗರ ಸಿವಿಲ್ ಮತ್ತು**
**ವಿಶೇಷ ನ್ಯಾಯಾಧೀಶರು, ಬೆಂಗಳೂರು ನಗರ.**